X

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2013-14ನೇ ಸಾಲಿನಲ್ಲಿ, 2011-12 ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಕೇಂದ್ರ ಸಹಾಯಧನ ಪಾವತಿಸುವ ಕುರಿತು

## ಪ್ರಸ್ತಾವನೆ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಶಿವಮೊಗ್ಗ ರವರು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮಡಡಿ 2011-12ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಇದರನ್ವಯ 2012-13ನೇ ಸಾಲಿನಲ್ಲಿ ಕಾರ್ಯಕ್ರಮದಡಿ ಬಿಡುಗಡೆ ಮಾಡಿದ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕೆ ವಿನಿಯೋಗಿಸಿದೇ ಬಾಕಿ ಉಳಿಸಿಕೊಂಡಿರುವ ಬೆಂಗಳೂರು(ನಗರ), ಬೀದರ್, ಚಾಮರಾಜನಗರ, ಗದಗ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು ಮತ್ತು ಯಾದಗೀರ್ ಜಿಲ್ಲಾ ಪಂಚಾಯತ್‌ಗಳಿಂದ ರೂ.66.23 ಲಕ್ಷಗಳನ್ನು ಹಿಂಪಡೆದು ಹೆಚ್ಚಿನ ಪ್ರಗತಿ ಸಾಧಿಸಿದ ಶಿವಮೊಗ್ಗ ಜಿಲ್ಲಾ ಪಂಚಾಯತ್‌ಗೆ ಮರು ಹಂಚಿಕೆ ಮಾಡಿ ವರ್ಗಾಯಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 46 ಜೈಅಯೋ 2012(ಪಿ), ಬೆಂಗಳೂರು

ದಿನಾಂಕ 20.08.2013.

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ 2011-12ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಕೇಂದ್ರ ಸಹಾಯಧನ ಪಾವತಿಗಾಗಿ, ಉಳಿಕೆ ಇಟ್ಟುಕೊಂಡಿರುವ ಬೆಂಗಳೂರು(ನಗರ), ಬೀದರ್, ಚಾಮರಾಜನಗರ, ಗದಗ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು ಮತ್ತು ಯಾದಗೀರ್ ಜಿಲ್ಲಾ ಪಂಚಾಯತ್‌ಗಳಿಂದ ರೂ.66.23 ಲಕ್ಷಗಳನ್ನು (ಅರವತ್ತಾರು ಲಕ್ಷದ ಇಪ್ಪತ್ತೂರು ಸಾವಿರಗಳು ಮಾತ್ರ) ಹಿಂಪಡೆದು ಶಿವಮೊಗ್ಗ ಜಿಲ್ಲಾ ಪಂಚಾಯತ್‌ಗೆ ಈ ಕೆಳಕಂಡಂತೆ ಮರು ಹಂಚಿಕೆ ಮಾಡಿ ವರ್ಗಾಯಿಸಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಬಾಕಿ ಉಳಿಸಿಕೊಂಡಿರುವ ಜಿಲ್ಲಾ ಪಂಚಾಯತ್ | ಹಿಂಪಡೆದ ಅನುದಾನ | ಮರುಹಂಚಿಕೆ ಮಾಡಲಾದ ಅನುದಾನ | ಮರುಹಂಚಿಕೆ ಮಾಡಲಾದ ಜಿಲ್ಲಾ ಪಂಚಾಯತ್ |
|---|---|---|---|---|
| 1 | ಬೆಂಗಳೂರು(ನಗರ) | 9.21 | 9.21 | ಶಿವಮೊಗ್ಗ |
| 2 | ಬೀದರ್ | 2.64 | 2.64 | |
| 3 | ಚಾಮರಾಜನಗರ | 0.52 | 0.52 | |
| 4 | ಗದಗ | 2.55 | 2.55 | |
| 5 | ಕೊಪ್ಪಳ | 17.89 | 17.89 | |
| 6 | ಮಂಡ್ಯ | 5.31 | 5.31 | |
| 7 | ಮೈಸೂರು | 13.53 | 13.53 | |
| 8 | ರಾಯಚೂರು | 8.72 | 8.72 | |
| 9 | ಯಾದಗೀರ್ | 5.86 | 5.86 | |
| | ಒಟ್ಟು | 66.23 | 66.23 | |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು(ನಗರ), ಬೀದರ್, ಚಾಮರಾಜನಗರ, ಗದಗ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು ಮತ್ತು ಯಾದಗೀರ್‌ರವರು ತಮ್ಮ ಜಿಲ್ಲೆಗೆ ಸಂಬಂಧಿಸಿದ ಅನುದಾನವನ್ನು ಬ್ಯಾಂಕ್/ಖಜಾನೆಯಿಂದ ಡ್ರಾ ಮಾಡಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಮರು ಹಂಚಿಕೆ ಮಾಡಲಾದ ಶಿವಮೊಗ್ಗ, ಜಿಲ್ಲಾ ಪಂಚಾಯತ್‌ಗೆ ಕೂಡಲೇ ಕಳುಹಿಸಿಕೊಡತಕ್ಕದ್ದು. ಮರುಹಂಚಿಕೆ ಮಾಡಲಾದ ಅನುದಾನವನ್ನು ಪಡೆಯುವಲ್ಲಿ ಹಾಗೂ ವರ್ಗಾಯಿಸುವಲ್ಲಿ ಸಂಬಂಧಿಸಿದ ಆಯಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮವಹಿಸಬೇಕಾಗಿರುತ್ತದೆ.

ಸದರಿ ಅನುದಾನವನ್ನು ಹಿಂಪಡೆದು ಮರು ಹಂಚಿಕೆ ಮಾಡಲಾದ ಜಿಲ್ಲಾ ಪಂಚಾಯತ್‌ಗಳು 2011-12ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳ ಕೇಂದ್ರ ಸಹಾಯಧನ ಬಾಕಿ ಪಾವತಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಮಾರ್ಗಪಲ್ಲಟ ಮಾಡಬಾರದು. ಸದರಿ ಅನುದಾನವು ಹಂಗಾಮಿಯಾಗಿದ್ದು, ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟಿರುತ್ತದೆ.

ಮರು ಹಂಚಿಕೆ ಮಾಡಲಾದ ಅನುದಾನವನ್ನು 2810-60-196-6-01 ರಡಿ ವೆಚ್ಚ ಭರಿಸಿ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಈ ಆದೇಶವನ್ನು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: 260 ಪಿಬಿಎಸ್ 2013 ದಿನಾಂಕ 05.07.2013 ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
Hemalatha
(ಪಿ.ಹೇಮಲತ)
ನಿರ್ದೇಶಕರು(ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ಮಹಾಲೇಖಪಾಲರು, ಕರ್ನಾಟಕ , ಬೆಂಗಳೂರು
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ, ಬೆಂಗಳೂರು(ನಗರ), ಬೀದರ್, ಚಾಮರಾಜನಗರ, ಗದಗ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು ಯಾದಗೀರ್
3. ಉಪಕಾರ್ಯದರ್ಶಿ/ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಶಿವಮೊಗ್ಗ, ಬೆಂಗಳೂರು(ನಗರ), ಬೀದರ್, ಚಾಮರಾಜನಗರ, ಗದಗ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು ಯಾದಗೀರ್
4. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ, ಬೆಂಗಳೂರು(ನಗರ), ಬೀದರ್, ಚಾಮರಾಜನಗರ, ಗದಗ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು ಯಾದಗೀರ್
5. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂಚಾಯತ್ ರಾಜ್ ಇಲಾಖೆ
2. ರಕ್ಷಾ ಕಡತಕ್ಕೆ
3. ಹೆಚ್ಚುವರಿ ಪ್ರತಿ